**ಕರ್ನಾಟಕ ಸರ್ಕಾರ**

**ರಾಷ್ಟ್ರೀಯ ಸೇವಾ ಯೋಜನೆ**

**ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560012**

ಸಂಖ್ಯೆ: ಪಪೂಶಿಇ/ರಾಸೇಯೋ/ವಿ.ಶಿ./2017–18 ದಿನಾಂಕ: 09/12/2017

**ಜ್ಞಾಪನ**

**ವಿಷಯ:** ದಿನಾಂಕ: 21-12-2017 ರಿಂದ 27-12-2017 ರ ವರೆಗೆ ನಡೆಯಲಿರುವ ರಾಜ್ಯ ಮಟ್ಟದ ಬಾಲಕಿಯರ ರಾಜ್ಯ ಮಟ್ಟದ ಎನ್.ಎಸ್.ಎಸ್.ಶಿಬಿರಕ್ಕೆ ಬಾಲಕಿಯರನ್ನು ನಿಯೋಜಿಸುವ ಬಗ್ಗೆ.

ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು **ದುದ್ದುಪೂಡಿ ಮಹಿಳಾ ಪದವಿಪೂರ್ವ ಕಾಲೇಜು, ಸಿಂಧನೂರು, ರಾಯಚೂರು ಜಿಲ್ಲೆ.** ಇವರ ಸಂಯುಕ್ತ ಆಶ್ರಯದಲಿ ರಾಜ್ಯ ಮಟ್ಟದ ಬಾಲಕಿಯರ 'ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳ ಶಿಬಿರವನ್ನು "ಆರೋಗ್ಯವಂತ ಭಾರತಕ್ಕಾಗಿ ಆರೋಗ್ಯವಂತ ಯುವಕರು"ಎಂಬ ಧ್ಯೇಯದೊಂದಿಗೆ ದಿನಾಂಕ: 21-12-2017 ರಿಂದ 27-12-2017 ರ ವರೆಗೆ **ಕನ್ನಡ ವಿಶ್ವವಿದ್ಯಾಲಯ , ಹಂಪಿ, ಕಮಲಾಪುರ ತಾ ಹೊಸಪೇಟೆ, ಜಿ. ಬಳ್ಳಾರಿ** ಇಲ್ಲಿ ಆಯೋಜಿಸಲಾಗಿದೆ. ಈ ಶಿಬಿರಕ್ಕೆ ತಮ್ಮ ಕಾಲೇಜಿನ ಉತ್ತಮ ಆರೋಗ್ಯವಂತ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ 02 ಬಾಲಕಿಯರನ್ನು ನಿಯೋಜಿಸಲು ಸೂಚಿಸಿದೆ. ನಿಯೋಜನೆಗೊಂಡ ಬಾಲಕಿಯರು ಶಿಬಿರದ ಸ್ಥಳದಲ್ಲಿ ದಿನಾಂಕ: 21-12-2017 ರ ಬೆಳಿಗ್ಗೆ 8.00 ಗಂಟೆಗೆ ಶಿಬಿರ ನಡೆಯುವ ಸ್ಥಳದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಶಿಬಿರಾರ್ಥಿಗಳು ಶಿಬಿರಕ್ಕೆ ಆಗಮಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕು.

6. ಶಿಬಿರಕ್ಕೆ ಆಗಮಿಸುವಾಗ ಗುರುತಿನ ಪತ್ರ, ಇಂಡೆಮ್ನಿಟಿ ಬಾಂಡ್/ತಂದೆ/ತಾಯಿ/ಪೋಷಕರ ಒಪ್ಪಿಗೆ ಪತ್ರ (ಕಡ್ಡಾಯವಾಗಿ ತರಬೇಕು)
7. ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ನಿಯೋಜನೆ ಪತ್ರ ತರಬೇಕು.
8. ಊಟದ ತಟ್ಟೆ, ಲೋಟ, ಲಘು ಹಾಸಿಗೆ ಮತ್ತು ಹೊದಿಕೆ, ಉಡುಪು, ಟಾರ್ಚ ಇತರೆ ವಸ್ತುಗಳನ್ನು ತರಬೇಕು
9. ಶಿಬಿರಕ್ಕೆ ಆಗಮಿಸುವ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಎನ್.ಎಸ್.ಎಸ್ ಶುಲ್ಕ ನಿಧಿಯಿಂದ ಭರಿಸುವುದು. ಉತ್ತಮ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಸಂಘಟಕರು ಮಾಡುವರು..
10. ಶಿಬಿರದ ನಿಯಮಗಳನ್ನು ಶಿಬಿರಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಬೆಲೆ ಬಾಳುವ ವಸ್ತುಗಳನ್ನು ಶಿಬಿರಕ್ಕೆ ತರಬಾರದು.

ತಮ್ಮ ವಿಶ್ವಾಸಿ

ರಾಜ್ಯ ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನೆ ಕೋಶ
ಮಲ್ಲೇಶ್ವರಂ, ಬೆಂಗಳೂರು.

**ಮಾಹಿತಿಗಾಗಿ ಸಂಪರ್ಕಿಸಿ:**

**ಅಶೋಕ ಮಸ್ಕಿ ಪ್ರಾಂಶುಪಾಲರು –9844474709**

**ಶಿವರಾಜ್ ಎಸ್ (ಸಹಾಯಕ ಸಂಯೋಜನಾಧಿಕಾರಿಗಳು ಗುಲ್ಬರ್ಗ ವಿಭಾಗ) ಸಂಖ್ಯೆ: 9448107887**

**ಆರ್. ಸಿ. ಪಾಟೀಲ್ ಶಿಬಿರಾಧಿಕಾರಿಗಳು– 9986369999**

**ವಿಶೇಷ ಸೂಚನೆ:**

**ಶಿಬಿರ ನಡೆಯುವ ಸ್ಥಳ: ಕನ್ನಡ ವಿಶ್ವವಿದ್ಯಾಲಯ , ಹಂಪಿ, ಕಮಲಾಪುರ ತಾ ಹೊಸಪೇಟೆ, ಜಿ. ಬಳ್ಳಾರಿ**

**ಬಸ್ ಮಾರ್ಗ ಸಂಖ್ಯೆ: ಹೊಸಪೇಟೆ ಮಾರ್ಗದಿಂದ ಕಮಲಾಪುರದಲ್ಲಿ ಬಸ್ ಇಳಿಯುವುದು ಅಲ್ಲಿಂದ ಕಾಲೇಜುವತಿಯಿಂದಲೇ ವಾಹನದ ವ್ಯವಸ್ಥೆ ಇರುವುದು**